BilagiF:\Aranya 123\Land\Cov-let-18-19.docx/p21

# ಕರ್ನಾಟಕ ಅರಣ್ಯ ಇಲಾಖೆ

ಕ್ರ.ಸಂ.ಬಿ2/ಭೂಮಿ/ಅ(ಸಂ)ಕಾ/ಹಲಕೇರಿ/2018-19 376(2)

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಘಟಪ್ರಭಾ ವಿಭಾಗ,
ಗೋಕಾಕ, ದಿ.29-06-2018.
2171

ಇವರಿಗೆ,

ಕಾರ್ಯನಿರ್ವಾಹಕ ಅಭಿಯಂತರರು,
ಯೋಜನೆ ವಿಭಾಗ, ಗೋಕಾಕ.

ಮಾನ್ಯರೇ,

ವಿಷಯ : ಹಲಕೇರಿ ತಾಂಡಾದಿಂದ ಹಲಕಿಯವರೆಗೆ ರಸ್ತೆ ಅಭಿವೃದ್ಧಿಗಾಗಿ 0.70ಹೆ. ಅರಣ್ಯ ಪ್ರದೇಶದಿಂದ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1] ತಮ್ಮ ಕಚೇರಿ ಪತ್ರ ಸಂ.EE/KRRDA/GKK Dn/2017-18/693 ದಿ.9-1-2018.
2] ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಳಗಾವಿ ವೃತ್ತ, ಬೆಳಗಾವಿರವರ ಕಚೇರಿ ಪತ್ರ ಸಂ.ಎ7/ಎಲ್ಎಸ್‌ಡಿ/ರಸ್ತೆ/ಹಲಕಿ/ಸಿಆರ್/2017-18 ದಿ.12-3-2018.
3] ಈ ಕಚೇರಿ ಪತ್ರ ಸಮ ಸಂಖ್ಯೆ ದಿ.28-3-2018.

---

ಮೇಲಿನ ವಿಷಯದ ಕುರಿತಂತೆ, ಉಲ್ಲೇಖ (2)ರಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಳಗಾವಿ ವೃತ್ತ, ಬೆಳಗಾವಿರವರು ನೀಡಿದ ಸೂಚನೆಯ ಮೇರೆಗೆ ಉಲ್ಲೇಖ (3)ರ ಈ ಕಚೇರಿ ಪತ್ರದಡಿಯಲ್ಲಿ ಹಲಕೇರಿ ತಾಂಡಾದಿಂದ ಹಲಕಿಯವರೆಗೆ ರಸ್ತೆ ಅಭಿವೃದ್ಧಿಗಾಗಿ 0.70ಹೆ. ಅರಣ್ಯ ಪ್ರದೇಶವನ್ನು ಬಿಡುಗಡೆ ಮಾಡುವ ಕುರಿತು ಈ ಕೆಳಗಿನ ಎರಡು ದಾಖಲೆಗಳನ್ನು ಸಲ್ಲಿಸಲು ಸೂಚನೆ ನೀಡಲಾಗಿತ್ತು. ಹಾಗೂ ಆನ್‌ಲೈನ್ ಪ್ರಸ್ತಾವನೆಯನ್ನು ಮರಳಿಸಲಾಗಿತ್ತು.

1) ಜಿಲ್ಲಾಧಿಕಾರಿಗಳು, ಬೆಳಗಾವಿರವರಿಂದ No alternative Suitable non-forest land ಪ್ರಮಾಣ ಪತ್ರ
2) ಸಂಬಂಧಿಸಿದ ಗ್ರಾಮ ಪಂಚಾಯತದಿಂದ FRA ಪ್ರಮಾಣ ಪತ್ರ

ಆದರೆ ದಿನಾಂಕ.28-6-2018ರಂದು ಜರುಗಿದ ವಿಡಿಯೋ ಕಾನ್ಫರನ್ಸ್‌ದಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಬೆಂಗಳೂರುರವರು ಸಧ್ಯ ಮೇಲಿನ ದಾಖಲೆಗಳ ಅಲಭ್ಯತೆ ಇದ್ದಲ್ಲಿಯೂ ಮುಂದೆ ಸದರಿ ದಾಖಲೆಗಳನ್ನು ಸಲ್ಲಿಸಬಹುದಾಗಿದ್ದರಿಂದ ಸಧ್ಯ ಪ್ರಸ್ತಾವನೆಯನ್ನು ಸದರಿಯವರಿಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಳಗಾವಿ ವೃತ್ತ ಬೆಳಗಾವಿರವರ ಮುಖಾಂತರ ಸಲ್ಲಿಸಲು ಸೂಚನೆ ನೀಡಿರುತ್ತಾರೆ.

ಕಾರಣ ಒಂದು ವಾರದೊಳಗಾಗಿ ಆನ್‌ಲೈನ್ ಮೂಲಕ ಪ್ರಸ್ತಾವನೆಯನ್ನು ಯಾವುದೇ ವಿಳಂಬವಿಲ್ಲದೇ ಸಲ್ಲಿಸಲು ತಿಳಿಸಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಘಟಪ್ರಭಾ ವಿಭಾಗ, ಗೋಕಾಕ.

ಕಾ.ನಿ.ಅ.ಯೋಜನಾ ವಿಭಾಗ, ಗೋಕಾಕ
ಸ.ಕಾ.ನಿ.ಅ.
ಸ.ಅ.
ಟಿ.ಅ.
ಕ್ರ.ಸಂ.

ಸ.ಕಾ.ನಿ.ಅ. ಯೋಜನಾ ಉಪ ವಿಭಾಗ, ಸವದತ್ತಿ
ಸ.ಕಾ.ನಿ.ಅ.
ಕಿ.ಇ. Bhalder
ಸ್ವೀಕೃತಿ 6-7-2018
ಆವಕ ಸಂ./ದಿನಾಂಕ: